ದಿಃ **03-01-2019**

ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಆರ್ ಬಿ ಪಿ ವಕೀಲರಿಂದಃ

ನನ್ನ ತಂದೆಯವರನ್ನು ದತ್ತಾತ್ರೇಯ ಹಾಗೂ ದತ್ತು ಎಂದು ಕರೆಯುತ್ತಿದ್ದರು ಎಂದರೆ ಸರಿ. ನನ್ನ ತಂದೆ ಸನ್ 2005 ಜೂನ್ ತಿಂಗಳಲ್ಲಿ ಮರಣಹೊಂದಿದ್ದಾರೆ. ರಾನಭಾ ಇವರು ದತ್ತಾತ್ರೇಯ ಇವರ ಅಣ್ಣ. ರಾನಭಾ ಇವರು ಸನ್ 1977 ರಲ್ಲಿ ಮರಣ ಹೊಂದಿದ್ದಾರೆ. ಆದರೆ ದಿನಾಂಕ ಗೊತ್ತಿಲ್ಲ. ರಾನಭಾ ಇವರಿಗೆ ಮದುವೆ ಯಾಗಿಲ್ಲ. ರಾನಭಾ ಇವರ ಹೆಂಡತಿ ಹೆಸರು ಗೊತ್ತಿಲ್ಲ. ಏಕೆಂದರೆ ರಾನಭಾ ಇವರು ಮರಣಹೊಂದುವ ಮೊದಲು ಅವರ ಹೆಂಡತಿ ವಿಚ್ಛೇದನೆ ಪಡೆದಿದ್ದರು. ಅವರಿಗೆ ಮಕ್ಕಳು ಇರಲಿಲ್ಲ. ನನ್ನ ತಂದೆಯ

ದಿಃ **03-01-2019** ಓ ಎಸ್ **88 /2014 (** ಪಿ ಡಬ್ಲ್ಯೂ **1)**

ತಂದೆಯ ಹೆಸರು ಲಕ್ಷ್ಮಣ ಎಂದರೆ ಸರಿ. ನನ್ನ ಅಜ್ಜನ ಪೂರ್ಣ ಹೆಸರು ಲಕ್ಷ್ಮಣ ರಾನಭಾ ಕೆಳೋಜಿ ಇದೆ. ನನ್ನ ಅಜ್ಜ ಲಕ್ಷ್ಮ ಇವರ ಅಜ್ಜನ ಹೆಸರು ಈರಪ್ಪ ಕೇಳೊಜಿ ಎಂದರೆ ಸರಿ . ಈರಪ್ಪ ಇವರಿಗೆ ರಾನಬಾ ಮತ್ತು ಬಾವಕಣ್ಣ ಎನ್ನುವ ಇಬ್ಬರು ಮಕ್ಕಳು ಎನ್ನುವದು ನನಗೆ ಗೊತ್ತಿಲ್ಲ . ದಾವಾ ಪತ್ರದ ಮಾಹಿತಿಯನ್ನು ತಿಳಿದಿದ್ದೇನೆ. ದಾವಾ ಪತ್ರದಲ್ಲಿನ ವಂಶಾವಳಿ ಕುರಿತು 2 ತಲೆಮಾರಿನ ಮಾಹಿತಿ ಸರಿ ಇದೆ ಉಳಿದಿದಂತೆ ಮಾಹಿತಿ ನನಗೆ ಇಲ್ಲ.

ವಾದಿಯ ಅಜ್ಜನ ಹೆಸರು ಬಾವಕಣ್ಣ ಕೇಳೋಜಿ ಎಂದರೆ ಸರಿ. ಬಾವಕಣ್ಣ ಮತ್ತು ರಾನಬಾ ಇವರ ತಂದೆಯ ಹೆಸರು ಈರಪ್ಪ ಎಂದರೆ ಸಾಕ್ಷಿಯು 2 ತಲೆಮಾರಿನ ಮಾಹಿತಿ ಹೊರತು ಪಡಿಸಿ ಉಳಿದ ತಲೆಮಾರಿನ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಜನಬಾಯಿ 1 ನೇ ವಾದಿಯ ತಾಯಿ, ಪ್ರತಿವಾದಿ ನಂ. 3 ಮತ್ತು 4 ಇವರು 1 ನೇ ವಾದಿಯ ಸಹೋದರಿಯರು ಎಂದರೆ ಸರಿ . 2 ನೇ ವಾದಿ ಮಾರುತಿ ಇವರು ಹೆಂಡತಿ ಎಂದರೆ ಸರಿ. ಮಾರುತಿ ಮತ್ತು ಯಲ್ಲಪ್ಪ ಇಬ್ಬರೂ ಸಹೋದರರು ಎಂದರೆ ಸರಿ. ನಮ್ಮ ಮನೆತನದ ಅಡ್ಡ ಹೆಸರು ಕೇಳೋಜಿ ಎಂದು ಇರುವುದು ಸನ್ 1980-82 ರಲ್ಲಿ ಕೆಳಪ್ಪ ಗಾವಡೆ ಎಂದು ನಂತರ ಗಾವಡೆ ಎಂದು ಬದಲಾಗಿದೆ.

ದಿಃ **03-01-2019** ಓ ಎಸ್ **88 /2014 (** ಪಿ ಡಬ್ಲ್ಯೂ**1)**

ನಮ್ಮ ಮನೆತನದ ಹಳೆ ಉತಾರುಗಳಲ್ಲಿ ಕೇಳೋಜಿ ಎಂದು ದಾಖಲಾಗಿದ್ದು , ಸಾಕ್ಷಿಯು ಕೇಳಪ್ಪ ಗಾವಡೆ ಎಂದು ದಾಖಲಾಗಿತ್ತು ಎಂದು ಹೇಳುತ್ತಾರೆ. ಈ ಕೆಳಪ್ಪ ಗಾವಡೆ ಎಂಬುವುದು ಹೋಗಿ ಗಾವಡೆ ಎಂದು ದಾಖಲಾಗಿದೆ. ನನ್ನ ತಾಯಿ ದೊಂಡುಬಾಯಿ ಸನ್ 2009 ರಲ್ಲಿ ಮರಣ ಹೊಂದಿದ್ದಾರೆ. ನನ್ನ ತಂದೆಗೆ ನಾನು ಒಬ್ಬನೇ ಮಗ ಎಂದರೆ ಸರಿ.

ದಾವಾ ಆಸ್ತಿಗಳ ಕಂಬೈಡ ಉತಾರ ನಾನು ನೋಡಿಲ್ಲ. ನಿಮ್ಮ ಮನೆತನಕ್ಕೆ ಎಷ್ಟು ರಿ ಸ ನಂಬರ ಆಸ್ತಿಗಳು ಇದೆ ಎಂದರೆ ಸಾಕ್ಷಿಯು ನನ್ನ ತಂದೆಯ ಹೆಸರಿಗೆ 13 ರಿ ಸ ನಂಬರ ಆಸ್ತಿಗಳು ಇದೆ ಎಂದು ಹೇಳುತ್ತಾರೆ. ಸದರಿ ರಿ ಸ ನಂಬರಗಳ ಮಾಹಿತಿ ಇದೆ ಅವುಗಳೆಂದರೆ ರಿ ಸ ನಂಬರ 12/4 ಎ , 12/4 ಬಿ , 18/1 ಎ , 18/6, 18/7, 156, 156 ಬ ,161, 161 /3/ಪಿ1 , 161/4/ಪಿ1, 162/3/ಪಿ1, 162/ಪಿ2, 18/2+3+4, 180/2+3 ಇರಬಹದು. ರಿ ಸ ನಂಬರ 156, 156 ಬ ನಮ್ಮ ಮನೆತನಕ್ಕೆ ಸಂಬಂದಿಸಿದಲ್ಲ ಅಂದರೆ ಸರಿಯಲ್ಲ. 161/4/ಪಿ1 ನಮ್ಮ ಕುಟುಂಬಕ್ಕೆ ಸರಿದಲ್ಲ ಮತ್ತು ನನ್ನ ತಂದೆಗೆ ಸಂಬಂಧಿಸಿದಲ್ಲ ಎಂದರೆ ಸರಿಯಲ್ಲ. ರಿ ಸ ನಂ 18/2 +3+4 ನಮ್ಮ ಕುಟುಂಬಕ್ಕೆ ಸಂಬಂಧಿಸಿದಲ್ಲ ನನ್ನ ತಂದೆ ಅದರ ಮಾಲಿಕರು ಅಲ್ಲ ಎಂದರೆ ಸರಿಯಲ್ಲ. ರಿ ಸ ನಂಬರ 161/3/ಪಿ1 ನಮ್ಮ ಕುಟುಂಬಕ್ಕೆ ಸಂಬಂಧಿಸಿದಲ್ಲ ಮತ್ತು ನಮ್ಮ ತಂದೆ ಅದರ

ಮಾಲೀಕರು ಅಲ್ಲ ಎಂದರೆ ಸರಿಯಲ್ಲ. ರಿ ಸನಂ 180/2+3 ರ ಉತಾರನ್ನು ಒಂದು ವರ್ಷದ ಹಿಂದೆ ನೋಡಿದ್ದೇನೆ. ಸದರಿ ಉತಾರಿನ ಮಾಲೀಕರು ಮತ್ತು ಕಬ್ಬಾದಾರ ಅಂಕಣದಲ್ಲಿ ಯಾರ ಹೆಸರು ನಮೂದು ಇದೆ ಎಂದು ಕೇಳಿದರೆ ಸಾಕ್ಷಿಯು ನನಗೆ ಕನ್ನಡ ಬರದೆ ಇರುವುದರಿಂದ ಹೇಳಲು ಆಗುವುದಿಲ್ಲ ಎಂದು ಹೇಳುತ್ತಾರೆ. ನಾನು ಬಿ.ಕಾಂ ಪದವಿದರ ಇದ್ದೆನೆ. ಸನ್ 1987 ರಿಂದ 2002 ರವರೆಗೆ ನೌಕರಿ ಮಾಡಿ ಈಗ ಕೃಷಿ ಮಾಡುತ್ತಿದ್ದೇನೆ. ನಾನು ಮುಂಬಯಿನಲ್ಲಿ ನೌಕರಿ ಮಾಡುತ್ತಿದ್ದು ಮಾರ್ಕೆಟಿಂಗ್ ವಿಚಾರದಲ್ಲಿ ಊರು ಕಡೆ ಬರುತ್ತಿದ್ದೆ. ರಿ ಸ ನಂಬರ 180/2+3 ಕ್ಷೇತ್ರ 14 ಗುಂಟೆಯ ಉತಾರನ್ನು ನನಗೆ ಗೊತ್ತಿರುವ ಭಾಷೆಯಲ್ಲಿ ಭಾಂಷಾಂತರ ಮಾಡಿ ನೋಡಿಲ್ಲ ಎಕೆಂದರೆ ನಾನು ಕಬ್ಬಾ ಹೊಂದಿದ್ದೇನೆ. ರಿ ಸ ನಂಬರ 180/2+3 ನಮ್ಮ ಮನೆತನ ಸ್ವತ್ತು ಅಲ್ಲ ನಾವು ಅದರ ಎಂದು ಕಜ್ಜಾದಲ್ಲಿ ಇಲ್ಲ ಎಂದರೆ ಸರಿಯಲ್ಲ. ಸದರಿ ಸ್ವತ್ತು ನಮಗೆ ಪ್ರಿತಾರ್ಜಿತವಾಗಿ ಬಂದಿದೆ. ರಿ ಸ ನಂಬರ 180/2+3 ರ ಉತಾರ ಹಾಜರುಪಡಿಸುತ್ತೇನೆ. ದಾವಾದ ಆಸ್ತಿಗಳು ಸಬ್‌ಡಿವಿಜನ್ ಆಗಿದೆ ಎಂದು ನನಗೆ ಹೇಳಲು ಬರುವುದಿಲ್ಲ. ನನ್ನ ತಂದೆಯ ಹೆಸರು ದಾಖಲೆ ಇರುವಾಗ ಉತಾರಿನ ಸ್ಥಿತಿ ಈಗಿರುವ ರೀತಿಯಲ್ಲಿ ಇತ್ತು . ದಾವಾ ಆಸ್ತಿಗಳು ಎಲ್ಲವೂ ಹಿರಿಯರಿಂದ ಬಂದ ಸ್ವತ್ತುಗಳು ಎಂದರೆ ಸಾಕ್ಷಿಯು ನನ್ನ ಹಿರಿಯರಿಂದ ಬಂದ ಸ್ವತ್ತುಗಳು ಎಂದು ಹೇಳುತ್ತಾರೆ.

ದಿಃ **03-01-2019** ಓ ಎಸ್ **88 /2014 (** ಪಿ ಡಬ್ಲ್ಯೂ**1)**

ವಿ ಪಿ ಸಿ ನಂಬರ 66 ಎ , 66 ಬಿ , 182/4 ಹಾಗೂ 330 ಸ್ವತ್ತುಗಳು ಹಿರಿಯರಿಂದ ಬಂದ ಸ್ವತ್ತುಗಳು ಎಂದರೆ ಸಾಕ್ಷಿಯು ನನ್ನ ತಂದೆಯಯಿಂದ ಬಂದ ಸ್ವತ್ತುಗಳು ಎಂದು ಹೇಳುತ್ತಾರೆ.

ಶ್ರೀ ಆರ್ ಬಿ ಪಿ ವಕೀಲರ ಪಾಟೀ ಸವಾಲನ್ನು ಕೋರಿಕೆ ಮೇರೆಗೆ ಮುಂದೂಡಲಾಯಿತು.

( ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯ ಮೇರೆಗೆ ಸಾಕ್ಷಿಯು ನೀಡಿದ ಸಾಕ್ಷವನ್ನು ಯಥಾವತ್ತು ದಾಖಲಿಸಿಕೊಳ್ಳಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು, ಹುಕ್ಕೇರಿ
ಸಂಚಾರಿ ನ್ಯಾಯಾಲಯ ಸಂಕೇಶ್ವರ.

*DWI present. Sri RBP adv present and permitted to cross-examination. Further cross-examination deferred by 17-01-2019*

*Senior Civil Judge, Hukkeri*
*Sitting at Sankeshwar.*